ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ **13-09-2024**

ಪಾಟಿ ಸವಾಲುಃ ಶ್ರೀ. ಎನ್.ಎಸ್.ಕೆ ವಕೀಲಂರಿಂದ **1** ನೇ ಪ್ರತಿವಾದಿಯ ಪರಃ-

ನನ್ನ ಗಂಡನ ಹೆಸರು ರಾಜ್ ಗೋಪಾಲ್ ಆಗಿದ್ದು ಅವರು ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಅವರು ಕೆಲಸದಲ್ಲಿದ್ದಾಗಲೇ ಸ್ವಯಂ ನೀವೃತ್ತಿ ಪಡೆದಿರುತ್ತಾರೆ. **2005** ರಲ್ಲಿ ಸ್ವಯಂ ನೀವೃತ್ತಿಯಾಗಿರುತ್ತಾರೆ. ಅವರ ಜೀವಿತ ಕಾಲದಲ್ಲಿ ಅವರಿಗೆ ಪಿಂಚಣಿ ಬರುತ್ತಿತ್ತು. **2005** ರಿಂದ ಬೇರೆ ಕಡೆ ಸೆಕ್ಯೂರಿಟಿಯಾಗಿ **8** ವರ್ಷ ಕೆಲಸ ಮಾಡಿರುತ್ತಾರೆ. ದಾವಾ ಆಸ್ತಿಗಳಲ್ಲಿ ನನ್ನ ಗಂಡ ಉಳುಮೆ ಮಾಡುತ್ತಿರಲಿಲ್ಲ ಎಂದರೆ ಸರಿ. **2013** ನಂತರ ಅವರು ವ್ಯವಸಾಯ ಮಾಡಲು ಪ್ರಾರಂಭಿಸಿರುತ್ತಾರೆ ಎಂದರೆ ಸರಿ. ಅವರ ಸಂಬಳ ಮತ್ತು ಪಿಂಚಣಿಯ ಹಣದಲ್ಲಿ ಯಾವುದೇ ಉಳಿತಾಯ ಮಾಡಲು ಆಗುತ್ತಿರಲಿಲ್ಲ.

**2013** ಮನೆ ಮಾರಿದಾಗ **8** ಲಕ್ಷ ಹಣ ಬಂದಿರುತ್ತದೆ. ಅದರಿಂದ ವ್ಯವಸಾಯ ಪ್ರಾರಂಭಿಸಿರುತ್ತೇವೆ, ಆ ಬಗ್ಗೆ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ. ಹಣ ಬಂದ ಬಗ್ಗೆ ಬ್ಯಾಂಕ್ ಸ್ಟೇಟ್ ಮೆಂಟ್ ಕೊಡಬಹುದು. **8** ಲಕ್ಷ ಬಂದ ಸಮಯದಲ್ಲಿ ನನ್ನ ಗಂಡ ಬೆಳೆ ಸಾಲ ಮತ್ತು ಚಿನ್ನವನ್ನು ಗಿರವಿ ಇಟ್ಟು ಸಾಲ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈತ್ತೀಚೆಗೆ ಬೆಳೆ ಸಾಲ ಮತ್ತು ಚಿನ್ನವನ್ನು ಗಿರವಿ ಇಟ್ಟು ಸಾಲ ಪಡೆದಿರುತ್ತೇವೆ. **8** ಲಕ್ಷ ಹಣ ಮುಗಿದ ಮೇಲೆ ಬ್ಯಾಂಕ್ ನಿಂದ

ಸಾಲ ಪಡೆದಿರುತ್ತೇವೆ. ಅದೇ ಸಮಯದಲ್ಲಿ ನಮ್ಮ ಜಮೀನಿನಲ್ಲಿ ಸಿಲ್ವರ್ ಓಕ್ ಗಿಡಗಳನ್ನು ಹಾಕಿರುತ್ತೇವೆ. ಅವುಗಳನ್ನು ನಾವು ಮಾರಾಟ ಮಾಡಿಲ್ಲ ಮಳೆಗೆ ಹಾನಿಯಾಗಿರುತ್ತೇವೆ. ಈತ್ತೀಚೆಗೆ **20** ಮರಗಳನ್ನು ಮಾರಾಟ ಮಾಡಿದಾಗ **30** ಸಾವಿರ ಹಣ ಬಂದಿರುತ್ತದೆ. ಅದನ್ನು ನನ್ನ ಗಂಡನ ತಿಥಿ ಕಾರ್ಯಕ್ಕೆ ಉಪಯೋಗಿಸಿರುತ್ತೇನೆ.

ತೋಟದಲ್ಲಿ ಸಿಲ್ವರ್ ಓಕ್, ಬಾಳೆ, ಕಾಫಿ ಬೆಳೆಯುತ್ತಿದ್ದೇವೆ ಎಂದರೆ ಸರಿ. ನನ್ನ ಮೊದಲನೆ ಮಗಳ ಹೆಸರು ಶೃತಿ, **2**ನೇ ಮಗಳ ಹೆಸರು ಶಿಲ್ಪ, **3**ನೇ ಮಗ ಅರ್ಜುನ ಇರುತ್ತಾರೆ. ನನ್ನ **2**ನೇ ಮಗಳು ಶಿಲ್ಪ ವಿದ್ಯಬ್ಯಾಸ ಮುಗಿಸಿ ಕೆಲಸಕ್ಕೆ ಹೋಗಿರುತ್ತಾರೆ. ಶಿಲ್ಪ ರವರಿಗೆ ಈಗ **31** ವರ್ಷ ಆಗಿರುತ್ತದೆ. ಅವರು ಪದವಿ ಮುಗಿಸಿ ಕೆಲಸಕ್ಕೆ ಹೋಗಿರುತ್ತಾರೆ. **2013** ರಲ್ಲಿ ಆಕೆ ಬೆಂಗಳೂರಿನಲ್ಲಿ ಕೆಲಸಕ್ಕೆ ಸೇರಿದ್ದರು ಎಂದರೆ ಸರಿ. ಅವರಿಗಿಂತ ಮುಂಚೆ ನನ್ನ ಮೊದಲನೆ ಮಗಳು ಶೃತಿ ಕೆಲಸಕ್ಕೆ ಸೇರಿದ್ದರು ಎಂದರೆ ಸರಿ. ಶೃತಿ ರವರ ಕೆಲಸಕ್ಕೆ ಸೇರಿದ ನಂತರ ಮಾಸಿಕ ಐದು ಸಾವಿರ ಹಣ ಕೊಡುತ್ತಿದ್ದರು. ಅದೇ ರೀತಿ ಶಿಲ್ಪ ಸಹ ಮಾಸಿಕ ಐದು ಸಾವಿರ ಕೊಡುತ್ತಿದ್ದರು. ಮೊದಲ ಮಗಳಿಗೆ ಹಣ ಕಳುಹಿಸಲು ಅಷ್ಟೊಂದು ಗೊತ್ತಾಗದ ಕಾರಣ **2**ನೇ ಮಗಳಾದ ಶಿಲ್ಪ ರವರ ಖಾತೆಯಿಂದ ನನ್ನ ಖಾತೆಗೆ ಹಣ

ಕಳುಹಿಸುತ್ತಿದ್ದರು. ಅದೇ ರೀತಿ ಶಿಲ್ಪ ಕೂಡ ಹಣ ಕಳುಹಿಸುತ್ತಿದ್ದರು. ನನ್ನ ಗಂಡನ ಖಾತೆಗೆ ಬಂದ ಹಣ ಎಲ್ಲಾ ಶಿಲ್ಪ ರವರು ಕಳುಹಿಸಿದ್ದಾರೆ ಎಂದರೆ ಸರಿ.

**2013** ರಿಂದ **2021** ರವರಗೂ ಸತತವಾಗಿ ಶಿಲ್ಪ ರವರು ಹಣ ಹಾಕುತ್ತಿದ್ದರು ಎಂದರೆ ಸರಿ. ನಾವು ಯಾವಾಗಲೂ ಹಣ ಕೇಳುತ್ತಿರಲಿಲ್ಲ ಅವಶ್ಯಕತೆ ಇದ್ದಾಗ ಮಾತ್ರ ಕೇಳುತ್ತಿದ್ದೇವು. ನನ್ನ ಗಂಡನಿಗೆ ಪಿಂಚಣಿ ಬರುತ್ತಿತ್ತು ಆ ಹಣ ಸಾಕಾಗದಿದ್ದಾಗ ನನ್ನ ಮಕ್ಕಳ ಬಳಿ ಹಣ ಕೇಳುತ್ತಿದ್ದೇ. ದಾವಾ ಆಸ್ತಿಗಳಲ್ಲಿ ಬರುತ್ತಿದ್ದ ವರಮಾನ ಅಲ್ಲಿನ ಖರ್ಚಿಗೆ ಸರಿ ಹೋಗುತ್ತಿತ್ತು. ದಾವಾ ಆಸ್ತಿಗಳಲ್ಲಿ ವಾರ್ಷಿಕ ಬೆಳೆ ಬಂದಾಗ ಆದಾಯ ಬರುತ್ತಿತ್ತು. ದಾವಾ ಆಸ್ತಿಗಳಲ್ಲಿ **2** ಲಕ್ಷ ಆದಾಯ ಬಂದರೆ ಅಷ್ಟೇ ಖರ್ಚಾಗುತ್ತಿತ್ತು ಎಂದಿರುತ್ತಾರೆ. ಆಸ್ತಿಗಳ ಆದಾಯ ಸಾಕಾಗುತ್ತಿರಲಿಲ್ಲ ಆದ್ದರಿಂದ ನನ್ನ ಮಕ್ಕಳು ಹಣ ಕಳುಹಿಸುತ್ತಿದ್ದರು.

ನನ್ನ ಮಗ ಅರ್ಜುನ **2019** ರಲ್ಲಿ ಕೆಲಸಕ್ಕೆ ಸೇರಿರುತ್ತಾನೆ. **2019** ರವರಗೂ ವಿದ್ಯಬ್ಯಾಸ ಮಾಡುತ್ತಿದ್ದ. **2013** ರಿಂದ **2021** ರವರೆಗೆ ಶಿಲ್ಪ ರವರು ಕಳುಹಿಸುತ್ತಿದ್ದ ಹಣ ಸುಮಾರು **8** ಲಕ್ಷ ಬಂದಿರಬಹುದು ಎಂದರೆ ಇರಬಹುದು ಎಂದಿರುತ್ತಾರೆ. ನನ್ನ **3** ಜನ ಮಕ್ಕಳು ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ. **2021** ರಲ್ಲಿ ಶಿಲ್ಪ ರವರಿಗೆ ವಿವಾಹ ಆಗಿರಬಹುದು. ಮದುವೆ ಆದ ನಂತರ ಶಿಲ್ಪ ರವರಿಂದ ಬರುತ್ತಿದ್ದ ಹಣ ನಿಂತಿರುತ್ತದೆ. ಶಿಲ್ಪ ರವರಿಂದ ಹಣ ಬರಲಿಲ್ಲದ ಕಾರಣ

ಮನಸ್ತಾಪ ಬಂದಿರುತ್ತದೆ ಎಂದರೆ ಸರಿಯಲ್ಲ. ಮದುವೆಯಾದ ನಂತರ ಮಗಳನ್ನು ಹಣ ಕೇಳಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ. ಮದುವೆ ಆದ ನಂತರ ಶಿಲ್ಪ ರವರನ್ನು ಮನೆಗೆ ಸೇರಿಸುತ್ತಿರಲಿಲ್ಲ ಅವರನ್ನು ನಿರ್ಲಕ್ಷ್ಯ ಮಾಡಿದ್ದೇವು ಎಂದರೆ ಸರಿಯಲ್ಲ.

ನನ್ನ ಗಂಡ ಕೊನೆಯ ಸಮಯದಲ್ಲಿ ಕ್ಯಾನ್ಸರ್ ನಿಂದ ಬಳಲುತ್ತಿದ್ದರು ಎಂದರೆ ಸರಿ. ಅವರನ್ನು ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಯಲ್ಲಿ ಸೇರಿಸಿರುತ್ತೇವೆ ಎಂದರೆ ಸರಿ. ನಾನು ಮತ್ತು ನನ್ನ ಮಗ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿರುತ್ತೇವೆ, **15** ದಿನ ಚಿಕಿತ್ಸೆ ಪಡೆದಿರುತ್ತಾರೆ. ದಾಖಲಾದ **10** ದಿನಗಳ ತನಕ ಹಿಮೋಥೆರಪಿ ಚಿಕಿತ್ಸೆ ಕೊಡಿಸಲು ನಾವು ಒಪ್ಪಿರಲಿಲ್ಲ. ವೈದ್ಯರ ಬಳಿ ನಾವು ವಾಪಸ್ಸು ಕರೆದುಕೊಂಡು ಹೋಗುತ್ತೇವೆ ಎಂದು ಹೇಳಿರುತ್ತೇವೆ ಎಂದರೆ ಸರಿಯಲ್ಲ. ವೈದ್ಯರೇ ಕರೆದುಕೊಂಡು ಹೋಗಿ ಎಂದು ತಿಳಿಸಿರುತ್ತಾರೆ. ಜೆ.ಎಸ್.ಎಸ್ ಆಸ್ಪತ್ರೆಯಿಂದ ನನ್ನ ಗಂಡನನ್ನು ನಮ್ಮ ಊರಿಗೆ ಕರೆದುಕೊಂಡು ಹೋಗಿರುತ್ತೇವೆ. ಆ ಸಮಯದಲ್ಲಿ ಶಿಲ್ಪ ರವರ ಮದ್ಯ ಪ್ರವೇಶದಿಂದ ಶಂಕರ ಆಸ್ಪತ್ರೆಗೆ ದಾಖಲಿಸಿರುತ್ತೇವೆ ಎಂದರೆ ಸರಿ. ಕ್ಯಾನ್ಸರ್ ಜಾಸ್ತಿ ಆದ ಕಾರಣ ಬೆಂಗಳೂರಿನಲ್ಲಿ ನನ್ನ ಗಂಡ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ದಾವಾ ಪತ್ರದಲ್ಲಿ ಸೋಮವಾರಪೇಟೆಯಲ್ಲಿ ಸತ್ತಿದ್ದಾರೆ ಎಂದು ನಾನು ತಿಳಿಸಿರುವುದಿಲ್ಲ. ಶಂಕರ

ಆಸ್ಪತ್ರೆಯಲ್ಲಿ ದಾಖಲು ಮಾಡಿದಾಗ ನಾನು ಹಣ ಕೊಟ್ಟ ಬಗ್ಗೆ ದಾಖಲೆ ಕೊಟ್ಟಿರುವುದಿಲ್ಲ.

ನನ್ನ ಮಗನ ಕಂಪನಿಯಿಂದ ವಿಮೆ ಇತ್ತು ಅದರ ಜೊತೆಗೆ ಶಿಲ್ಪ ರವರು ಸಹ **50** ಸಾವಿರ ಕೊಟ್ಟಿರುತ್ತಾರೆ ಎಂದರೆ ಸರಿ. ದಿಃ **10-09-2023** ರಲ್ಲಿ ನನ್ನ ಗಂಡ ಮೃತ ಪಟ್ಟಿರುತ್ತಾರೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ, ಇಂಗ್ಲೀಷ್ ಓದುತ್ತೇನೆ ಅರ್ಥ ಆಗುವುದಿಲ್ಲ. ನಾನು **10** ನೇ ತರಗತಿವರೆಗೆ ವಿದ್ಯಬ್ಯಾಸ ಮಾಡಿರುತ್ತೇನೆ. ದಾವಾ ಆಸ್ತಿಗಳಲ್ಲಿ ಭಾಗಾಂಶ ಬೇಕ ಎಂದು ಕೇಳಿರುತ್ತೇನೆ ಎಂದರೆ ಸರಿ. ಎಲ್ಲಾ ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನನ್ನ ಗಂಡ ಜೀವಿತ ಕಾಲದಲ್ಲಿ ಅವರು ಸಂಪಾದಿಸಿದ ಆಸ್ತಿಯಲ್ಲ. ವಿಭಾಗ ಮಾಡಿ ಎಂದು ಯಾರನ್ನು ಕೇಳಲ್ಲಿ ಆದರೆ ನನ್ನ ಪಾಲನ್ನು ಪಡೆಯುವ ಉದ್ದೇಶದಿಂದ ದಾವೆ ಹೂಡಿರುತ್ತೇನೆ.

ನನ್ನ ಗಂಡನ ಮರಣದ ನಂತರ ಶಿಲ್ಪ ರವರು ನನಗೆ ಮತ್ತು ಶ್ರುತಿಗೆ ಮತ್ತು ಅರ್ಜುನನಿಗೆ ವಕೀಲರ ಮೂಲಕ ನೋಟಿಸು ಕಳುಹಿಸಿದ್ದರು ಎಂದರೆ ಸರಿ. ಅದರಲ್ಲಿ **1/4** ನೇ ಭಾಗ ಭಾಗಾಂಶ ಬೇಕು ಎಂದು ಕೇಳಿದ್ದರು ಎಂದರೆ ಸರಿ, ಅದಕ್ಕೆ ನಾನು ಉತ್ತರವನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಉತ್ತರದಲ್ಲಿ ನನ್ನ ಗಂಡ ಜೀವಿತ ಕಾಲದಲ್ಲಿ ಶಿಲ್ಪ ರವರು ಬೇಡ ಎಂದು ಹೇಳಿರುವ ದಾಖಲೆ ಹಾಜರುಪಡಿಸಲ್ಲ. ಯಾವುದೇ ಆಸ್ತಿಯ ಬಗ್ಗೆ ಅವರ ಜೊತೆ ಮಾತಾಡಿಲ್ಲ. ದಿಃ **21-**

**11-2023** ರಂದು ನಾನು ತಹಶೀಲ್ದಾರರ ಮುಂದು ಒಂದು ಅರ್ಜಿ ಕೊಟ್ಟಿರುತ್ತೇನೆ. ಅ ಅರ್ಜಿಯಲ್ಲಿ ನನ್ನ ಗಂಡನ ಎಲ್ಲಾ ಆಸ್ತಿಗಳನ್ನು ನನ್ನ ಹೆಸರಿಗೆ ಪೌವತಿ ಖಾತೆ ಮಾಡಿ ಎಂದು ಕೊಟ್ಟಿರುತ್ತೇನೆ ಎಂದರೆ ಸರಿ. ಅದಕ್ಕೆ ಶಿಲ್ಪ ರವರು ತಕರಾರು ಮಾಡಿರುತ್ತಾರೆ ಎಂದರೆ ಸರಿ. ಅವರು ತಕರಾರು ಕೊಟ್ಟ ನಂತರ ತಹಶೀಲ್ದಾರರು ಈ ಸ್ವತ್ತುಗಳನ್ನು ಜಂಟಿ ಹೆಸರಿನಲ್ಲಿ ಖಾತೆ ಮಾಡಲು ಆದೇಶ ಮಾಡಿರುತ್ತಾರೆ ಎಂದರೆ ಸರಿ. ಈ ಎಲ್ಲಾ ದಾವಾ ಆಸ್ತಿಗಳು ಜಂಟಿ ಖಾತೆಯಲ್ಲಿರುತ್ತವೆ.

ನನ್ನ ಗಂಡನ ಜೀವಿತ ಕಾಲದಲ್ಲಿ ಸರ್ವೆ ನಂ.**89/5** ರಲ್ಲಿ **4** ಸೈಟುಗಳನ್ನು ನಾವು ನಾಲ್ಕು ಜನರು ಹಂಚಿಕೊಂಡಿರುತ್ತೇವೆ ಎಂದರೆ ಸರಿ. ಅದೂ ಸಹ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸರ್ವೆ ನಂ.**89/6** ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸರ್ವೆ ನಂ.**86/6** ರ ಆಸ್ತಿ ಅರ್ಜುನನ ಹೆಸರಿಗೆ ದಾನ ಪತ್ರ ಆಗಿದೆ ಎಂದರೆ ಸರಿ. ಆ ದಾನ ಪತ್ರ ಮಾಡುವ ಸಮಯದಲ್ಲಿ **1** ಮತ್ತು **2**ನೇ ಪ್ರತಿವಾದಿಗಳು ಸಹಿ ಮಾಡಿಲ್ಲ ಎಂದರೆ ಸರಿ. ದಾನ ಪತ್ರ ಮಾಡುವಾಗ **1** ಮತ್ತು **2**ನೇ ಪ್ರತಿವಾದಿಗಳಿಗೆ ಮಾಹಿತಿ ಇಲ್ಲ ಎಂದರೆ ಸರಿ. ನನ್ನ ಮತ್ತು ಅರ್ಜುನನ ಹೆಸರಿಗೆ ಬಂದಿರುವ **2** ಸೈಟುಗಳನ್ನು ಸಾಲ ತೀರಿಸಲು ಮಾರಾಟ ಮಾಡಿರುತ್ತೇವೆ. ನನ್ನ ಗಂಡನ ಜೀವಿತ ಕಾಲದಲ್ಲಿ ದಾನ ಪತ್ರ ಮಾಡುವ ಉದ್ದೇಶ ಇರಲಿಲ್ಲ ಎಂದರೆ ಸರಿ. ನಾನು ಮತ್ತು ಅರ್ಜುನ ಸೇರಿ ರಾಜ್ ಗೋಪಾಲ್ ರವರಿಂದ ಮೋಸದಿಂದ ದಾನ ಪತ್ರ ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ.

ಚಿನ್ನದ ವಿಷಯವನ್ನು ಈ ದಾವೆಯಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮರಣದ ನಂತರ ಎಸ್,ಬಿ.ಐನಲ್ಲಿ ಪಂಚಣಿಯನ್ನು ತಡೆ ಹಿಡಿದಿಲ್ಲ ಬರುತ್ತಿರುತ್ತದೆ. ಆ ಬಗ್ಗೆ **3** ಜನ ಮಕ್ಕಳ ತಕರಾರು ಇಲ್ಲ ಎಂದರೆ ಸರಿ. ನವೆಂಬರ್ **2022** ರಲ್ಲಿ ಶೃತಿ ಮದುವೆ ಆಗಿರುತ್ತದೆ ಎಂದರೆ ಸರಿ. ಮದುವೆ ಮುಂಚೆ ಆಗಸ್ಟ್ ನಲ್ಲಿ ನಾನು ಮತ್ತು ಅರ್ಜುನ್ **2** ಸೈಟುಗಳನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಆ ಹಣವನ್ನು ಶೃತಿ ಮಗಳ ಮದುವೆ ಉಪಯೋಗಿಸಿರುತ್ತೇವೆ. ಸದರಿ ಮದುವೆಗೆ ಶೃತಿ ಸಹ ಸಾಲ ಮಾಡಿ ಕೊಟ್ಟಿರುತ್ತಾರೆ. ಮದುವೆಗೆ ಹಣ ಕಡಿಮೆಯಾಗಿದ್ದು ಆಗ ಶೃತ ಹಣ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಂಪೂರ್ಣ ಹಣವನ್ನು ಮದುವೆಗೆ ಉಪಯೋಗಿಸಿರುತ್ತೇವೆ. ಶಲ್ಪ ರವರ ಮದುವೆಗೆ ನಾವು ಯಾವುದೇ ಹಣವನ್ನು ಖರ್ಚು ಮಾಡಿಲ್ಲ.

ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು** ಮಾಡ**ಲಾಗಿದೆ).**

ಸಹಿ/-
**ಓ ಹೇ ಕೇ ಸರಿ ಇದೆ**

**ಪ್ರ ದ ನ್ಯಾ ದಂ ಸೋ ಪೇಟೆ**